ರಾಜಕಾಲುವೆಗಳು ಮತ್ತು ಒತ್ತುವರಿ

66(82); ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಬರುವ ರಾಜ ಕಾಲುವೆಗಲು ಮತ್ತು ಒತ್ತುವರಿ ಕುರಿತಾಗಿ ಗುರುತಿಸಲಾಗಿರುವ ಒಟ್ಟು ಪ್ರಕರಣಗಳೆಷ್ಟು (ವಿವರ ನೀಡುವುದು);

ಆ) ಒತ್ತುವರಿ ಮಾಡಿದ, ಎಷ್ಟು ಮಳೆ ನೀರು ಕಾಲುವೆಗಳನ್ನು ತೆರವುಗೊಳಿಸಲಾಗಿದೆ; ಆ ಮೂಲಕ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ತನ್ನ ವಶಕ್ಕೆ ಪಡೆದುಕೊಂಡ ಭೂಮಿಯ ಪ್ರಮಾಣ ಎಷ್ಟು ಮತ್ತು ಮುಂದೆ ಅವುಗಳ ಒತ್ತುವರಿ ತಡೆಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ರಾಜ ಕಾಲುವೆಗಳ ಸುಸ್ಥಿತಿ ಮತ್ತು ಹೊಂದಿರುವ ಭೂಮಿಯ ಅಕ್ರಮ ತಡೆಗಾಗಿ ಮತ್ತು ಅಕ್ರಮಗಳನ್ನು ತೆರವುಗೊಳಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಟ್ಟುನಿಟ್ಟಿನ ಮತ್ತು ಕಾಲ ನಿರ್ಭಂಧಿತ ಕ್ರಮಗಳೇನು;

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕೋರ್ ಏರಿಯಾ ಮತ್ತು ಹೊರವಲಯಗಳಲ್ಲಿ (ವೃಷಭಾವತಿ, ಕೋರಮಂಗಲ, ಹೆಬ್ಬಾಳ ಮತ್ತು ಚಲ್ಲಘಟ್ಟ ಕಣಿವೆಗಳೂ ಸೇರಿದಂತೆ) ಒಟ್ಟು 633 ಮಳೆನೀರು ಕಾಲುವೆಗಳಿದ್ದು, ವಿಸ್ತೃತ ಯೋಜನಾ ವಲಯದಂತೆ, ಈ ಕಾಲುವೆಗಳ ಒಟ್ಟು ಉದ್ದ 842 ಕಿ.ಮೀಗಳು. ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಿದೆ.

ಈ ಮೆಳೆನೀರು ಕಾಲುವೆಗಳ ಪಥದಲ್ಲಿ ಒಟ್ಟು 1415 ಒತ್ತುವರಿ ಪ್ರಕರಣಗಳನ್ನು ಹಾಗೂ ಸುಮಾರು 1118 ಎಕರೆ 2 ಗುಂಟೆ ಪ್ರದೇಶಗಳನ್ನು ಗುರುತಿಸಲಾಗಿದೆ. ವಿವರಗಳನ್ನು **ಅನುಬಂಧ–2** ರಲ್ಲಿ ಒದಗಿಸಿದೆ.

ಆ) ಗುರುತಿಸಿರುವ 1415 ಒತ್ತುವರಿ ಪ್ರಕರಣಗಳಲ್ಲಿ ಇದುವರೆಗೆ 508 ಪ್ರಕರಣಗಳಲ್ಲಿ ಒತ್ತುವರಿಗಳನ್ನು ತೆರೆವುಗೊಳಿಸಲಾಗಿದೆ. ಉಳಿಕೆ 907 ಪ್ರಕರಣಗಳಲ್ಲಿ ಮತ್ತು ಅನಧಿಕೃತವಾಗಿ ಒತ್ತುವರಿಯಾಗಿರುವ ಸುಮಾರು 118 ಎಕರೆ 2 ಗುಂಟೆ ಪ್ರದೇಶಗಳಲ್ಲಿ ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ವಲಯವಾರು ವಿವರಗಳನ್ನು **ಅನುಬಂಧ–3** ರಲ್ಲಿ ಒದಗಿಸಿದೆ.

ಮಳೆ ನೀರು ಕಾಲುವೆಗಳ ರೆವಿನ್ಯೂ ಸರ್ವೆ ನಡೆಸಿ ಒತ್ತುವರಿ ಗುರುತಿಸಿ ತೆರವುಗೊಳಿಸಿದ ನಂತರ ಮಳೆನೀರು ಕಾಲುವೆಗಳ ವಿಸ್ತೃತ ಯೋಜನಾ ವರದಿಯಂತೆ ವಿನ್ಯಾಸಕ್ಕನುಗುಣವಾಗಿ ಅನುದಾನ ಲಭ್ಯತೆಯನ್ನಾಧರಿಸಿ ಮಳೆನೀರು ಕಾಲುವೆಗಳನ್ನು ನಿರ್ಮಿಸಿ, ಮುಂದೆ ಗಡಿ ಒತ್ತುವರಿ ತಡೆಯಲು ಚೈನ್ ಲಿಂಕ್ ಫೆನ್ಸಿಂಗ್ ಅಳವಡಿಸುವ ಯೋಜನೆ ಹಮ್ಮಿಕೊಳ್ಳಲಾಗಿದೆ.

ಇ) ರಾಜಕಾಲುವೆಗಳ ಒತ್ತುವರಿಗಳನ್ನು ಖಚಿತ ಪಡಿಸಿಕೊಳ್ಳಲು ಪ್ರಸ್ತುತ ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಸಹಯೋಗದೊಂದಿಗೆ ಕಂದಾಯ ಸರ್ವೆ ಕೈಗೊಳ್ಳಲಾಗುತ್ತಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಹೊರ ವಲಯಗಳಲ್ಲಿನ ಒಟ್ಟಾರೆ 652 ಕಿ.ಮೀ ಪೈಕಿ 409.52 ಕಿ.ಮೀ ಉದ್ದದ ಮಳೆನೀರು ಕಾಲುವೆಗಳ ಸರ್ವೆ, ಕಾಲುವೆಗಳ ಗಡಿ ಹಾಗೂ ಒತ್ತುವರಿಗಳನ್ನು ಗುರುತಿಸುವ ಕಾರ್ಯ ಪ್ರಗತಿಯಲ್ಲಿವೆ.

ಮಳೆನೀರು ಕಾಲುವೆಗಳು ಕಿಲೋಮೀಟರ್‌ಗಟ್ಟಲೇ ಉದ್ದವಿದ್ದು, ಈ ಕಾಲುವೆಗಳ ಸರ್ವೆ ಕಾರ್ಯ ಪೂರ್ಣಗೊಳಿಸಿ ದೃಢೀಕೃತ ಸರ್ವೆ ನಕ್ಷೆ ತಯಾರಿಸಿ, ನಕ್ಷೆ ವಿವರಗಳಂತೆ ಅನಧಿಕೃತ ಒತ್ತುವರಿಗಳನ್ನು ತೆರವುಗೊಳಿಸುವ ಕಾರ್ಯಗಳನ್ನು ಈಗಾಗಲೇ ಬಿ.ಬಿ.ಎಂ.ಪಿ. ವತಿಯಿಂದ ಪ್ರಾರಂಭಿಸಲಾಗಿದೆ ಇದೊಂದು ನಿರಂತರ ಪ್ರಕ್ರಿಯೆಯಾಗಿದ್ದು, ಇದಕ್ಕೆ ಕಾಲಮಿತಿಯನ್ನು ವಿಧಿಸುವುದು ಕಷ್ಟ ಸಾಧ್ಯವಾಗಿರುತ್ತದೆ.

ಅನುಬಂಧ–1

Details of Primary and Secondary Storm water drains in BBMP area.

Annexure-2

Core Area.

Sl. No	Name of valley	No of Drains	Primary Drain length (km)	Secondry Drain length (km)	Total Drain length (km)
1	Vrishabhavathi Valley	34	32.5	57.5	90
2	Koramangala Valley	25	23.5	47.5	71
3	Challaghatta Valley	12	16.5	16.5	33
4	Hebbala Valley	24	26	26	52
	Total	95	98.5	147.5	246

Peripheral Area.

Sl. No	Name of Zone	No of Drains	Primary Drain length (km)	Secondry Drain length (km)	Total Drain length (km)
1	Rajarajeshwari Nagara	94	78	62	140
2	Dasarahalli	69	43	44	87
3	Byatarayanapura	68	38	41	79
4	Mahadevapura	188	98	80	178
5	Bommanahalli Zone	119	60	52	112
	Total	538	317	279	596
	Grand Total	633	415.5	426.5	842

Chif Eningeer
Storm water Drain Zone
BBMP

ಅನುಬಂಧ–II

Details of Encroachments Identified in Strom water Drain Zones Annexure-2					
Sl. No	Name of the Zone	No of Identified Encroachments (old)	No of Identified Encroachments (New)	Total No of Identified Encroachments	Remarks Extent of Identified encroachments Acres-Guntas
1	Koramangala valley	24	11	35	-
2	East Zone	347	0	347	-
3	West Zone	13	0	13	-
4	South Zone	31	0	31	-
5	Bommanahalli Zone	32	11	43	1-26
6	R.R.Nagara Zone	24	8	32	0-08
7	Yelahanka Zone	9	386	395	100-07
8	Mahadevapura Zone	43	221	264	12-27
9	Dasarahalli Zone	159	100	255	3-13
		682	737	1415	118-02

Chif Eningeer
Storm water Drain Zone
BBMP

ಅನುಬಂಧ–III

Details of Encroachments Removed in Strom water Drain Zones
Annexure-III

Sl. No	Name of the Zone	Total No of Identified Encroachments	No of Encroachments Removed	Total No of Encroachments to be removed	Remarks Extent of Identified encroachments Acres-Guntas
1	Koramangala valley	24	11	35	-
2	East Zone	347	0	347	-
3	West Zone	13	0	13	-
4	South Zone	31	0	31	-
5	Bommanahalli Zone	32	11	43	1-26
6	R.R.Nagara Zone	24	8	32	0-08
7	Yelahanka Zone	9	386	395	100-07
8	Mahadevapura Zone	43	221	264	12-27
9	Dasarahalli Zone	159	100	255	3-13
		682	737	1415	118-02

Chif Eningeer
Storm water Drain Zone
BBMP

ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ

67(88); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳಲ್ಲಿ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಏರ್ಪಡಿಸುವ ಕುರಿತಾದ ಸರ್ಕಾರದ ಕ್ರಿಯಾ ಯೋಜನೆಗಳೇನು (ವಿವರ ನೀಡುವುದು)

ಆ) ಈ ಹಿಂದೆ ಜರುಗಿಸಿರುವ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದ (ಜಿಮ್) ಮೂಲಕ ಸ್ಥಾಪಿಸಿರುವ ಕೈಗಾರಿಕೆಗಳ ಒಟ್ಟು